ಪ್ರಶ್ನೆಗಳನ್ನು ಆಗಾಗ ಅವಳು ಕೇಳುತ್ತಿದ್ದಳು.

ಅಪ್ಪ ಮುಖದ ಮೇಲೆ ನಗುವೊಂದನ್ನು ಎಳೆದು ತರಲಾರದೇ ನಿಡುಸುಯ್ಯುತ್ತಿದ್ದರು. ವಾರ್ಡಿನೊಳಗೆ ಅಮ್ಮ. ಎಮರ್ಜೆನ್ಸಿ ವಾರ್ಡಿನ ಹೊರಗೆ ಅಪ್ಪ. ಇಬ್ಬರೂ ಸುಮ್ಮನೆ ಕಣ್ಣು ಮುಚ್ಚಿ ಕುಳಿತುಬಿಡುತ್ತಿದ್ದರು. ಒಳಮನಸ್ಸಿನಲ್ಲಿ ಅವರಿಗೆ ಕಾಣುತ್ತಿದ್ದುದು ಮಗುವಿನ ಅಸ್ಪಷ್ಟ ಚಿತ್ರ ಮತ್ತು ಅದಕ್ಕಾಗಿ ಅವರು ದಿನ ರಾತ್ರಿ ಎನ್ನದೇ ಪ್ರಾರ್ಥನೆ ಮಾಡುತ್ತಿದ್ದರು. ಯಾರಾದರೂ ಎದುರಿಗೆ ಬಂದು ನಿಂತರೆ ಸುಮ್ಮನೆ ನೋಡುತ್ತಿದ್ದರಷ್ಟೆ. ಆದರೆ, ಅವರ ಮನಸ್ಸಿನಲ್ಲಿ ಒಂದು 'ತಪ' ಜಾರಿಯಲ್ಲಿರುತ್ತಿತ್ತು. ಒಂದು ದಿನ, ಎರಡು ದಿನ... ಮತ್ತೆ ವಾರಗಳು. ಅಪ್ಪ ಇದ್ದುದು ಹಾಗೆಯೇ. ಇಪ್ಪತ್ತೆಂಟು ದಿನಗಳ ಬಳಿಕ ಇನ್‌ಕ್ಯುಬೇಟರ್‌ನಿಂದ ಆ ಜೀವವನ್ನು ಎತ್ತಿ ತಂದರು. ವಾರ್ಡಿನಲ್ಲಿ ಅಮ್ಮನ ಬಳಿ ತಂದು ಮಲಗಿಸಿದರು. ಕೈಕಾಲುಗಳು ಸಣ್ಣಗೆ ರೂಪ ಪಡೆದುಕೊಳ್ಳುತ್ತಿವೆ ಅನ್ನಿಸಿದರೂ ಅದು ನಿಜವೇ ಎಂದು ನಂಬುವುದು ಕಷ್ಟವಿತ್ತು. ಮನುಷ್ಯ ರೂಪದ ಚರ್ಮದ ಹೊದಿಕೆ ಬೆಳೆದುಕೊಳ್ಳುತ್ತಿದೆ ಅನಿಸಿತ್ತು. ಅದಕ್ಕೆ ಹುಟ್ಟಿದಾಗಿನಿಂದ ಒಂದೇ ಒಂದು ಹನಿ ಎದೆಹಾಲು ಉಣಿಸಿಲ್ಲ. ಹಾಗೆ ಉಣಿಸುವುದಾದರೂ ಎಲ್ಲಿಂದ, ಅದರ ಬಾಯಿ ಇನ್ನೂ ಸರಿಯಾಗಿ ಆಕಾರವನ್ನೇ ಪಡೆದಿರಲಿಲ್ಲ. ಹಾಲು ತುಂಬಿಕೊಂಡ ಅಮ್ಮ ಮಗುವಿಗೆ ನೇರವಾಗಿ ಹಾಲುಣಿಸಿದ್ದೇ ಇಲ್ಲ. ಹಾಲನ್ನು ಸಂಗ್ರಹಿಸಿ ಸಣ್ಣದೊಂದು ಫಿಲ್ಲರ್‌ನಲ್ಲಿ ನರ್ಸ್‌ಗಳೇ ಮಗುವಿಗೆ ಕೊಟ್ಟಿದ್ದರು. ಈಗ ಮಡಿಲಿಗೆ ಕಂದ ಬಂದದ್ದೇ ಭರಪೂರ ಹಾಲುಣಿಸಬೇಕು ಎನಿಸಿತ್ತು ಅವಳಿಗೆ. ಪುಟ್ಟಬಾಯಿಗೆ ಎರಡು ಹನಿ ಹಾಲು ಹಿಂಡಿದಳು. ಕಣ್ಣು ಕೂಡ ಬಿಡಲಾಗದ ಅದು ಸಣ್ಣಗೆ ಚಪ್ಪರಿಸಿತು. ಅಲ್ಲಿ ಬಳ್ಳಿಯೊಂದು ಚಿಗುರೊಡೆದಂತೆ ಜೀವ ಜಗತ್ತಿನಲ್ಲಿ ಬಂಧವೊಂದು ಸ್ಪಷ್ಟವಾಗತೊಡಗಿತು.

'ಆ ಕ್ಷಣವನ್ನು ನಾನೆಂದೂ ಜೀವನದಲ್ಲಿ ಮರೆಯಲಾರೆ, ಇಡೀ ಜೀವ ಹಿಂಡಿದ ಅನುಭವ. ಕಣ್ಣುಗಳೊಳಗೆ ಆನಂದಭಾಷ್ಪ ತುಂಬಿ ತುಂಬಿ ಮಂಜಾಗಿತ್ತು' ಎಂದು ಅಮ್ಮ ಎಷ್ಟೋ ಬಾರಿ ಆ ಅಮೃತ ಕ್ಷಣವನ್ನು ನನ್ನ ಬಳಿ ಹೇಳಿಕೊಂಡಿದ್ದಳು. ಅಪ್ಪ ಸಾಕ್ಷಿಯಾಗಿದ್ದರು.

ಆದರೆ, ಅಮ್ಮನ ಖುಷಿ ಬಹಳ ಹೊತ್ತು ಉಳಿಯಲೇ ಇಲ್ಲ. ಅವಳೊಗಿನ ಅಗ್ನಿಪರ್ವತದ ನಾಲ್ಕೇ ನಾಲ್ಕು ಕಿಡಿ ಆಚೆ ಬಂದಿತ್ತು ಅಷ್ಟೇ. ಎರಡೇ ತಾಸು, ಮಗುವಿನ ಆರೋಗ್ಯ ಇನ್ನಷ್ಟು ಬಿಗಡಾಯಿಸಿತು. ಮತ್ತೆ ಆತಂಕದ ಕ್ಷಣಗಳು ಆರಂಭವಾದವು. ಮಗು ಸಣ್ಣ ಉಸಿರು ಎಳೆದುಕೊಳ್ಳಲೂ ಒದ್ದಾಡತೊಡಗಿತು. ಅದು ಹಾಗೆ ಮಾಡುವಾಗಲೆಲ್ಲ ಅರ್ಧ ಗಾಳಿ ತೆಗೆದ ಬಲೂನು ನಿರಿಗೆಗಟ್ಟಿ ಮತ್ತೆ ಗಾಳಿ ತುಂಬಿಕೊಂಡಂತೆ ಅನಿಸುತ್ತಿತ್ತು. ಅದನ್ನು ಕಣ್ಣಾರೆ ಕಂಡವರ್‍ಯಾರಿಗೂ ಮನುಷ್ಯ ಜೀವನ ಬೇಕು ಅಂತ ಅನ್ನಿಸಲಿಕ್ಕೆ ಕಾರಣವೇ ಇರಲಿಲ್ಲ. ಅವಸರಕ್ಕೆ ಬಿದ್ದು ಹಾಲೂಡಿಸಿ ತಪ್ಪು ಮಾಡಿದೆನೆ, ಅಷ್ಟೇ ನನಗಿರುವ ಭಾಗ್ಯವೇ ಎಂದುಕೊಂಡ ಅಮ್ಮ ಕುಸಿದಳು.

ಡಾಕ್ಟರು ಮಗವಿಗೆ ವೆಂಟಿಲೇಟರ್ ಹಾಕುವ ನಿರ್ಧಾರಕ್ಕೆ ಬಂದರು. ಯಾವೆಲ್ಲಾ ಪರೀಕ್ಷೆಗಳಿಗೆಂದು ಪೈಪ್ ಅಳವಡಿಸಿದರು. ಬ್ಲಡ್ ಟೆಸ್ಟ್ ಮಾಡಬೇಕು ಎಂದರು. ಆ ದೇಹದಿಂದಲೂ ರಕ್ತ ತೆಗೆಯಲು ಸಾಧ್ಯವೇ? ಹೇಗೋ ತೆಗೆದರು. ಪ್ಲೇಟ್ಲೆಟ್ ಕೊಡಬೇಕು ಎಂದರು. ಅಮ್ಮನಿಗೆ ಇದಾವುದನ್ನೂ ಕಣ್ಣಾರೆ ನೋಡಲು ಸಾಧ್ಯವಾಗಲಿಲ್ಲ. ತನ್ನ ವಾರ್ಡಿಗೆ ಹೋಗಿ ಕಣ್ಣು ಮುಚ್ಚಿ ಮಲಗಿಬಿಟ್ಟಳು. ಅವಳೊಳಗಿನ ಅಗ್ನಿಪರ್ವತ ಮತ್ತೆ ಕಿಡಿಗಳನ್ನು ಸೇರಿಸಿಕೊಳ್ಳುತ್ತಿರುವುದು ಯಾರಿಗಾದರೂ ತಿಳಿದುಬಿಡುತ್ತಿತ್ತು. ಅಪ್ಪ ಆ ಇಂಟೆನ್ಸಿವ್‌ಕೇರ್ ವಾರ್ಡಿನ ಮುಂದೆ ಹೋಗಿ ವಿಗ್ರಹದಂತೆ ಕುಳಿತುಬಿಟ್ಟರು.

'ಎಷ್ಟೋ ಬಾರಿ ಹಾಗೆ ಅಲ್ಲವೇ ದಯಾ, ಮುಗಿದು ಹೋಯಿತು ಜೀವನ ಎಂಬುದು ನಮಗೆ ನಿಚ್ಚಳವಾಗಿ ಕಾಣಿಸುತ್ತಿರುತ್ತದೆ. ಆದರೆ, ಬೆನ್ನು ಹಾಕಿ ನಡೆದುಬಿಡಲು ಸಾಧ್ಯವೇ ಆಗುವುದಿಲ್ಲ. ಅಪ್ಪ ಮಾಡಿದ್ದೂ ಅದನ್ನೇ. 'ಏನು ಮಾಡುವೆಯೋ ಗೊತ್ತಿಲ್ಲ, ಅದು ನನ್ನ ಜೀವ, ಆಕೆ ನನಗಾಗಿ ಉಳಿಯಬೇಕು' ಎಂಬ ಪ್ರಾರ್ಥನೆಯನ್ನು ಮಾತ್ರ ಚಾಲ್ತಿಯಲ್ಲಿಟ್ಟರು. ಇಂತಹ ಜೀವಪರವಾದ ಯೋಚನೆಯನ್ನು ಅವರು ಒಂದೇ ಒಂದು ಕ್ಷಣವೂ ಬಿಡಲಿಲ್ಲ.

ಅವರು ಮಾಡಿದ ಪ್ರಾರ್ಥನೆ ಸತತ ಮೂರು ತಿಂಗಳು. ಹಸಿವು, ನಿದ್ದೆ, ಯಾವುದೂ ಅವರನ್ನು ಬಾಧಿಸಲಿಲ್ಲವೇ? ಗೊತ್ತಿಲ್ಲ. ಆವತ್ತೊಂದು ದಿನ ಬೆಳಗಿನ ಜಾವ ಅಮ್ಮ ಮುಖಕ್ಕೆ ತೆಳ್ಳನೆಯ ಮಫ್ಲರ್ ಸುತ್ತಿಕೊಂಡು ಮೆಲ್ಲಗೆ ಆಸ್ಪತ್ರೆಯ ಕಾರಿಡಾರ್ ಏರುತ್ತಾ